ಓ. ಎಸ್. ನಂಃ 122/2011

ಡಿ . ಡಬ್ಲ್ಯೂಃ 4

ದಿಃ04-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎನ್ ಎನ್ ಪಿ ವಾದಿ ಪರ ವಕೀಲರಿಂದ ಃ

ನಾನು ಸೇಲ್ಸ ಎಕ್ಸಿಕೂಟಿವ್ ಆಗಿ ಖಾಸಗಿ ಕೆಲಸ ಮಾಡುತ್ತೇನೆ. ನಾನು ಡಿಪ್ಲೋಮಾ ಒದಿದ್ದೇನೆ. ನನ್ನ ಜನ್ಮ ದಿನಾಂಕ 25-03-1991 ಇರುತ್ತದೆ. ಈ ದಾವೆಗೆ ವಿಠಲ ಎನ್ನುವವರು ತಕರಾರು ಕೊಟ್ಟಿದ್ದಾರೆ . ಪ್ರಮಾಣ ಪತ್ರ ಬರೆಯಲು ಯಾರು ಮಾಹಿತಿ ಕೊಟ್ಟರು ಎನು ಬರೆದಿದೆ ಎಂದು ನನಗೆ ಗೊತ್ತಿದೆ . ನನ್ನ ತಂದೆ ಹಾಗೂ ತಾಯಿ ಅವರು ಮಾಹಿತಿ ನೀಡಿದ್ದಾರೆ. ದಾವಾ ಆಸ್ತಿ ನಂಬರ 2135/1 ಇರುತ್ತದೆ . ದಾವಾ ಆಸ್ತಿ ನನ್ನ ತಂದೆ ಅವರ ಹೆಸರಿನಲ್ಲಿ ಇತ್ತು . ದಾವಾ ಆಸ್ತಿ ಮೊದಲಿನಿಂದ ನನ್ನ ತಂದೆಯ ಹೆಸರಿನಲ್ಲಿಯೇ ಇದೆ . ನಿಪಿ1 ರಂತೆ ದಾವಾ ಆಸ್ತಿ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು 2320 ರಾಮಪ್ಪ ಜಾಧವ ಅವರ ಹೆಸರಿನಲ್ಲಿ ಇದೆ ಎಂದರು. ಮೂಲತಹ ದಾವಾ ಆಸ್ತಿ ನಂಬರ 2135 ಎಂದರೆ ಸರಿ . ಆಸ್ತಿ ನಂಬರ 2135 ರಲ್ಲಿ ಒಟ್ಟು 15 ಬಾಡಿಗೆ ಮನೆಗಳು ದಾವಾ ಮಾಡುವ ಪೂರ್ವದಲ್ಲಿ ಇದ್ದವು ಅದಕ್ಕೆ 2135 /1 ರಿಂದ 2135/15 ಎಂದು ಮನೆಗಳಿಗೆ ನಂಬರ ಕೊಟ್ಟಿದ್ದರು . ಮೊದಲು ಇವೆಲ್ಲಾ ಕೆಂಪು ಹಂಚಿನ ಮನೆಗಳು ಇತ್ತು ಎಂದರೆ ಸರಿ . ಆ ಮನೆಗಳನ್ನು 1 ನೇ ಪ್ರತಿವಾದಿಯವರು ಬಾಡಿಗೆ ಕೊಟ್ಟಿದ್ದರು ಎಂದರೆ ಸರಿ . ಪ್ರತಿ ತಿಂಗಳು ಕನಿಷ್ಟ 15 ಸಾವಿರ ಬಾಡಿಗೆ ಬರುತಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿ ತಿಂಗಳು ಸುಮಾರು 1200/- ರೂ ಬಾಡಿಗೆ ಬರುತ್ತಿತ್ತು . ದಾವಾ ಆಸ್ತಿ ಹಿರಿಯರಿಂದ ಬಂದ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿಯು ನನ್ನ ತಂದೆಯವರು ಖರೀದಿ ಮಾಡಿದ್ದಾರೆ . ನನ್ನ ತಂದೆ ಎಷ್ಟನೇ ಈಸವಿಯಲ್ಲಿ ಖರೀದಿ ಮಾಡಿದ್ದರು ಎಂದು ಗೊತ್ತಿಲ್ಲ . 2135/1 ರಿಂದ 2135/15 ಕ್ಕೆ ಚಕುಬಂದಿ ಒಂದೇಇದೆ ಎಂದರೆ ಸರಿ , ಪೂರ್ವಕ್ಕೆ ಶಿಗ್ಗಾವ ಸವಣೂರು ರಸ್ತೆ, ಪಶ್ಚಿಮಕ್ಕೆ ಮೌಲಾಲಿ ಗುಡ್ಡದ ರಸ್ತೆ , ಉತ್ತರ ಸಂಕ್ಲಿಪುರ ಅವರ ಆಸ್ತಿ , ದಕ್ಷಿಣಕ್ಕೆ ಮುಲ್ಲಾ ಅವರ ಮನೆ ಮತ್ತು ಖಾಲಿ ಜಾಗ ಇದೆ ಎಂದರೆ ಸರಿ. ಚಂದ್ರಬಾಲಕ್ಷ್ಮಿ ನಾರಾಯಣ ರಾವ ಅವರ ಮದುವೆ ಆಯಿತು ಎಂದರೆ ಗೊತ್ತಿಲ್ಲ . ದಿ 13-07- 1975 ರಂದು ಸದರಿ ಮದುವೆ ಆಗಿದೆ

ಎಂದರೆ ಗೊತ್ತಿಲ್ಲ. ಅವರಿಗೆ 1 ನೇ ವಾದಿ ಮಗ ಜನಿಸಿದ್ದಾನೆ ಎಂದರೆ ಗೊತ್ತಿಲ್ಲ. ವಾದಿಯವರ ಪರಿಚಯ ಈಗ ಇದೆ . ವಾದಿಯವರು ನನ್ನ ತಂದೆಯ ಮೊದಲನೇ ಪತ್ನಿ ಮತ್ತು ಮಗ ಇರುತ್ತಾರೆ. ಇವರು ಮದುವೆ ಆಗಿ ಎರಡು ವರ್ಷಕ್ಕೆ ನನ್ನ ತಂದೆ ಮತ್ತು ಅವರ ಮೊದಲನೇ ಪತ್ನಿ ನಡುವೆ ಜಗಳ ಆಯಿತು ಆಗ ನನ್ನ ತಂದೆ ಎಮ ಸಿ ನಂಬರ 5/1981 ಎಂದು ಪ್ರಿನ್ಸಿಪಲ್ ಸಿವಿಲ್ ನ್ಯಾಯಾಲಯ ದಾರವಾಡದಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಹಿರಿಯರು ರಾಜಿ ಮಾಡಿ ಸದರಿ ಅರ್ಜಿಯನ್ನು ಹಿಂಪಡೆದರು ಎಂದರೆ ಗೊತ್ತಿಲ್ಲ. 1986 ರಲ್ಲಿ ನನ್ನ ತಂದೆ ಎಮ ಸಿ 2/1986 ಎಂದು ದಾಖಲು ಮಾಡಿದ್ದರು ಎಂದರೆ ಗೊತ್ತಿಲ್ಲ , ಸದರಿ ಕೇಸ 27-07-1988 ರಲ್ಲಿ ಡಿಕ್ರಿ ಆಯಿತು ಎಂದರೆ ಗೊತ್ತಿಲ್ಲ . ಆಗ ಚಂದ್ರಬಾಗ ಅವರು ನನ್ನ ತಂದೆ ವಿರುದ್ದ ಕ್ರಿಮಿನಲ್ ಮಿಸಲೇನಿಯಸ್ 71/1994 ಎಂದು ಅರ್ಜಿ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ .ಸದರಿ ಅರ್ಜಿಯಲ್ಲಿ ನನ್ನ ತಂದೆ ಜೀವನಾಂಶಕ್ಕಾಗಿ ಆಸ್ತಿ ನೀಡುತ್ತೇನೆ ಎಂದು ಹೇಳಿ ಅರ್ಜಿಯನ್ನು ಹಿಂದೆ ತೆಗೆಸಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ3 ತೋರಿಸಿದ್ದು ಸಾಕ್ಷಿ ನನಗೆ ಅರ್ಥ ಆಗಿಲ್ಲ ಎಂದು ನುಡಿಯುತ್ತಾರೆ. ತುಕಾರಾಮ ನಾರಾಯಣ ಜಾದವ ನನ್ನ ಅಣ್ಣ ಯಾವಾಗ ಜನಿಸಿದರು ಎಂದರೆ 19-06-1989 ರಂದು ಜನಿಸಿದ್ದಾರೆ. ನಿಪಿ5 ರಂತೆ ದಿ14-06-1988 ಎಂದು ಶಾಲಾ ದಾಖಲಾತಿಯಲ್ಲಿದೆ ಎಂದರೆ ಸಾಕ್ಷಿಯು ಜನನ ಪ್ರಮಾಣ ಪತ್ರದಲ್ಲಿ 19-06-1989 ಇದೆ ಎಂದು ನುಡಿಯುತ್ತಾರೆ. ನಿಪಿ 5 ರಲ್ಲಿ ಜನ್ಮ ದಿನಾಂಕ ತಪ್ಪು ಇದೆ ಎಂದು ಯಾವುದೇ ಕ್ರಮ ಕೈಗೊಂಡಿಲ್ಲ . ಉಮಾ ನಾರಾಯಣ ಜಾದವ ಅವರು 25-07-1986 ರಲ್ಲಿ ಜನಿಸಿದ್ದಾರೆ. ರೇಣುಕಾ ಅವರು ಯಾವಾಗ ಜನಿಸಿದರು ಎಂದರೆ ಸಾಕ್ಷಿಯು ಉಮಾ ಅವರಿಗಿಂತ 2 ವರ್ಷ ಮೊದಲು ಜನಿಸಿದ್ದಾರೆ ಎಂದು ನುಡಿದರು. 15-01-1984 ರಲ್ಲಿ ಉಮಾ ಜನಿಸಿದ್ದಾರೆ ಎಂದರೆ ಸರಿ . ವಿಠಲ ಅವರ ಮದುವೆ 12-02-2011 ರಲ್ಲಿ ಗಂಗಿಬಾವಿಯಲ್ಲಿ ಮದುವೆ ಆಗಿದೆ ಎಂದರೆ ಸರಿ . ವಿಠಲ ಅವರ ಮಾವ ಕೆ ಎಸ್ ಆರ ಪಿ ಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ . ಮದುವೆಯನ್ನು ವಿಠಲ ಅವರ ಮಾವ ಮಾಡಿಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ನಿಪಿ8 1 ನೇ ವಾದಿಯವರ ಲಗ್ನ ಪತ್ರ ಎಂದರೆ ಸರಿ . ದಾವಾ ಆಸ್ತಿಯನ್ನು ನಾರಾಣಯಣ ಅವರ ತಂದೆ ರಾಮಚಂದ್ರ ಜಾದವ ಅವರು ಖರೀದಿ ಮಾಡಿದ್ದರು ಆಗ ನಾರಾಯಣ ಅವರು ಅಲ್ಪವಯಿ ಇದ್ದು ಅವರಿಗೆ 6 ವರ್ಷ ಇತ್ತು ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸಿವಿಲ್ ಪೋಲಿಸ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ . ನನ್ನ ತಂದೆ 44 ನೇ ವಯಿಸ್ಸಿನಲ್ಲಿದ್ದಾಗ ಉದ್ಯೋಗದಿಂದ ಅಮಾನತ್ತು ಆಗಿದ್ದರು ಎಂದರೆ

ಗೊತ್ತಿಲ್ಲ. ದಾವಾ ಆಸ್ತಿ ಹಿರಿಯರಿಂದ ಬಂದ ಆಸ್ತಿ ಎಂದರೆ ಗೊತ್ತಿಲ್ಲ . ದಾವಾ ಆಸ್ತಿಯಲ್ಲಿ 2 ರಿಂದ 5 ನೇ ಪ್ರತಿವಾದಿಯವರಿಗೆ ಯಾವುದೇ ಹಕ್ಕು ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. 2 ನೇ ವಾದಿ ಜೀವಂತ ಇದ್ದಾಗ 2 ರಿಂದ 5 ನೇ ಪ್ರತಿವಾದಿಯವರು ಜನಿಸಿದ್ದರಿಂದ ಯಾವುದೇ ಹಕ್ಕು ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯವರಿಗೆ ಮಾತ್ರ ಹಿಸ್ಸೆ ಇದೆ ನಮಗೆ ಇಲ್ಲ ಎಂದರೆ ಸರಿಯಲ್ಲ. ಮುಂಡರಗಿ ಆಸ್ತಿ ನಂಬರ 172 ಚಂದ್ರಬಾಗ ಅವರು ಖರೀದಿ ಹಿಡಿದ ಆಸ್ತಿ ಎಂದರೆ ಸರಿಯಲ್ಲ . ಚಂದ್ರಬಾಗ ಅವರು ನೌಕರಿ ಮಾಡುತಿದ್ದರು ಎಂದರೆ ಸರಿ . ಆಸ್ತಿ ನಂಬರ 172 ಆಸ್ತಿ ಚಂದ್ರಬಾಗ ಅವರು ತಮ್ಮ ಹೆಸರಿನಲ್ಲಿ ಖರೀದಿ ಮಾಡಿದ ಆಸ್ತಿ ಎಂದರೆ ಸರಿ . ಮತ್ತೊಂದು ಆಸ್ತಿ ಖರೀದಿ ಮಾಡಲು ನನ್ನ ತಂದೆ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿ ನಂ. 2 ನೇವರು ಖರೀದಿ ಮಾಡಿದ ಆಸ್ತಿಯಲ್ಲಿ ಹಕ್ಕಿಯಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾವಾಗ ಮರಣ ಹೊಂದಿದ್ದರು ಎಂದರೆ 15.01.2017 ರಂದು ಮರಣ ಹೊಂದಿದ್ದಾರೆ. 25.03.2013 ರಂದು ಸಂಪೂರ್ಣ ವಿಚಾರಣೆಯಾಗಿ ಈ ದಾವೆ ಡಿಕ್ರಿಯಾಗಿತ್ತು ಎಂದರೆ ಸರಿ. ದಾವಾ ಆಸ್ತಿ 1 ನೇ ಪ್ರತಿವಾದಿ ಯವರ ತಂದೆ ಅ.ಸ.ದಾ.ರ ತಂದೆ ಎಂದು 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೆ ನಂ. 216 ಪ್ಲಾಟ ನಂ. 30 ಕ್ಕೆ ಸಂಬಂಧಿಸಿದ್ದು ಎಂದರೆ ಗೊತ್ತಿಲ್ಲ. 23.01.1958 ರಲ್ಲಿ ಬಿನ ಶೀತ್ಕಿ ಪ್ಲಾಟಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಗೊತಿಲ್ಲ ಆ ಸಮಯದಲ್ಲಿ ನನ್ನ ತಂದೆಗೆ 6 ವರ್ಷ ಇತ್ತು ಎಂದರೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ಇ ಸ್ವತ್ತುಗಳನ್ನು ದಾವೆ ಚಾಲ್ತಿ ಇದ್ದಾಗ ಪುರಸಬೆಅವರ ಜೊತೆಗೆ ಮಿಲಾಪಿಯಾಗಿ ಮಾಡಿಸಿದೆ ಎಂದರೆ ಸರಿಯಲ್ಲ ಸದರಿ ಆಸ್ತಿಗಳಲ್ಲಿ ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.